ಹೊಸದಾಗಿ ಸಿಎಲ್-2 ಸಿಎಲ್-9 ಸನ್ನದುಗಳನ್ನು ನೀಡುವ ಕುರಿತು

1843 (2158) ಶ್ರೀ ನಾರಾಯಣ್ ಆರ್. (ಬೆಳ್ಳಾವಿ):

ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ರಾಜ್ಯದಲ್ಲಿ ಇಲ್ಲಿಯವರೆಗೂ ಸಿಎಲ್-2, ಸಿಎಲ್-9 ಸನ್ನದುಗಳನ್ನು ನೀಡಲಾಗಿರುವ ಸಂಖ್ಯೆ ಎಷ್ಟು;

(ಆ) ಪ್ರವಾಸೋದ್ಯಮ ಅಭಿವೃದ್ಧಿ ಅಡಿಯಲ್ಲಿ ನೀಡಲಾಗಿರುವ ಸಿಎಲ್-4, ಸಿಎಲ್-7 ಮತ್ತು ಸಿಎಲ್-9 ಸನ್ನದುಗಳ ಸಂಖ್ಯೆ ಎಷ್ಟು;

(ಇ) ಬದಲಾದ ಸಾಮಾಜಿಕ ಹಾಗೂ ಉತ್ತಮಗೊಂಡಿರುವ ಆರ್ಥಿಕ ಪರಿಸ್ಥಿತಿಯಲ್ಲಿ ಸಿ.ಎಲ್-2 ಮತ್ತು ಸಿ.ಎಲ್-9 ಸನ್ನದುಗಳ ಸಂಖ್ಯೆಯನ್ನು ಹೆಚ್ಚಿಸಲು ಕ್ರಮ ಕೈಗೊಳ್ಳಲಾಗುವುದೇ?

ಶೀ ಎಂ.ಎಂ. ನಾಣಯ್ಯ (ಅಬಕಾರಿ ರಾಜ್ಯ ಸಚಿವರು)

(ಅ) ರಾಜ್ಯದಲ್ಲಿ ಒಟ್ಟು

ಸಿಎಲ್-2	3877
ಸಿಎಲ್-9	3276

(ಆ) ಪ್ರವಾಸೋದ್ಯಮ ಅಭಿವೃದ್ಧಿ ಅಡಿಯಲ್ಲಿ ನೀಡಿಲಾದ ಸನ್ನದುಗಳ ಸಂಖ್ಯೆ ಈ ಕೆಳಗಿನಂತಿವೆ.

ಸಿ.ಎಲ್.7	68
ಸಿ.ಎಲ್.9	186
ಸಿ.ಎಲ್.4	ಇಲ್ಲಾ.

(ಇ) ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶಿ ಮದ್ಯ ಮಾರಾಟ) ನಿಯಮ 1968 ರ ನಿಯಮ 12 (2)ರ ಪ್ರಕಾರ ತಾಲ್ಲೂಕಿನಲ್ಲಿ ಇರುವ ಜನಸಂಖ್ಯೆ ಹಾಗೂ ಬೇಡಿಕೆಗೆ ಅನುಗುಣವಾಗಿ ಸಿ.ಎಲ್.2 ಮತ್ತು ಸಿ.ಎಲ್.9 ಅಂಗಡಿಗಳ ಸಂಖ್ಯೆಗಳನ್ನು ನಿಗದಿಪಡಿಸಲಾಗುವುದು. ಈ ಅಂಗಡಿಗಳನ್ನು ಗಮನದಲ್ಲಿಟ್ಟುಕೊಂಡು ಸನ್ನದುಗಳನ್ನು ಹೆಚ್ಚಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಮದ್ಯಪಾನ ಕುಡಿತದಿಂದಾಗಿ ಮಾಡಿದ ಅಪರಾಧ ಕುರಿತು

1844 (2515) ಶ್ರೀ ನಾರಾಯಣ್ ಆರ್. (ಬೆಳ್ಳಾವಿ):

ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ರಾಜ್ಯದಲ್ಲಿ ಇತ್ತೀಚೆಗೆ ಮದ್ಯಪಾನ ಕುಡಿತದ ಮತ್ತಿನಿಂದ ಪ್ರೇರಿತರಾಗಿ ವಿವಿಧ ರೀತಿಯ ಅಪರಾಧಗಳನ್ನು ಎಸಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

(ಅ) ಬಂದಿದ್ದಲ್ಲಿ ಇದನ್ನು ನಿಗ್ರಹಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು?

ಶೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು)

(ಅ) ಹೌದು.

(ಆ) ಕೈಗೊಂಡ ಕ್ರಮಗಳು

ಇಂತಹ ಘಟನೆಗಳನ್ನು ತಡೆಯುವುದಕ್ಕೋಸ್ಕರ ಮೋಟಾರು ವಾಹನ ಕಾನೂನು ಅಡಿಯಲ್ಲಿ ಹಾಗೂ ಕರ್ನಾಟಕ ಪೊಲೀಸ್ ಕಾಯ್ದೆ ಅಡಿಯಲ್ಲಿ ಕ್ರಮಗಳನ್ನು ಜರುಗಿಸಲಾಗುತ್ತಿದೆ ಮತ್ತು ರಾಜ್ಯದ ಎಲ್ಲಾ ಪೊಲೀಸ್ ಅಧಿಕಾರಿಗಳಿಗೆ ವಾಹನಗಳನ್ನು ಚೆಕ್ ಮಾಡಿ ವಿಶೇಷವಾಗಿ ರಾತ್ರಿ ಸಮಯದಲ್ಲಿ ಮದ್ಯಪಾನ ಮಾಡಿ ವಾಹನಗಳನ್ನು ನಡೆಸುವುದರ ಮೇಲೆ ಮೋಟಾರು ವಾಹನ ಕಾಯ್ದೆ ಅಡಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪ್ರಕರಣಗಳನ್ನು ದಾಖಲು ಮಾಡಲು ಸೂಕ್ತ ಸೂಚನೆಗಳನ್ನು ನೀಡಲಾಗಿದೆ.

ರಾಜ್ಯದ ಎಲ್ಲಾ ಠಾಣಾ ಸರಹದ್ದುಗಳಲ್ಲಿ ಬರುವ ಬಾರ್‌ಗಳು, ಸಾರಾಯಿ ಅಂಗಡಿಗಳನ್ನು ರಾತ್ರಿ ನಿಗದಿತ ವೇಳೆಯಲ್ಲಿ ಮುಚ್ಚಲು ಸೂಚಿಸಲಾಗಿದೆ. ನಿಗದಿತ ವೇಳೆ ಮೀರಿ ಮಾರಾಟ ಮಾಡುತ್ತಿರುವವರ ಮೇಲೆ ಕಾನೂನು ರೀತ್ಯಾ ಕ್ರಮ ಕೈಗೊಳ್ಳಲು ರಾಜ್ಯದ ಎಲ್ಲಾ ಪೊಲೀಸ್ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ.

ಸರ್ಕಾರದ ಅಧೀನದ ನಷ್ಟದಲ್ಲಿರುವ ಕಾರ್ಖಾನೆಗಳನ್ನು ಮುಚ್ಚುವ ಬಗ್ಗೆ

1846 (2161) ಶ್ರೀ ನೀಲಕಂಠಪ್ಪ ಬಿ.ಆರ್ (ತರೀಕೆರೆ):

ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿ ಹಾಗೂ ಸಂಪನ್ಮೂಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಸರ್ಕಾರದ ಅಧೀನದಲ್ಲಿರುವ ಎನ್‌ಜಿಇಎಫ್, ಮೈಸೂರ್ ಲ್ಯಾಂಪ್ ವರ್ಕ್ಸ್, ಮೈಸೂರು ಸೋಪ್ಸ್ ಅಂಡ್ ಡಿಟರ್ಜೆಂಟ್ ಕಾರ್ಖಾನೆಗಳು ಕಳೆದ 5 ವರ್ಷಗಳಿಂದ ಉತ್ಪಾದನೆಯ ಗುರಿ ಯಾವ ಮಟ್ಟದಲ್ಲಿದೆ;

(ಆ) ಸರ್ಕಾರದ ಅಧೀನದಲ್ಲಿರುವ ಮತ್ತು ಸಂಪೂರ್ಣ ನಷ್ಟದಲ್ಲಿರುವ ಕಾರ್ಖಾನೆಗಳ ಸಂಖ್ಯೆ ಎಷ್ಟು;

(ಇ) ಸಂಪೂರ್ಣವಾಗಿ ನಷ್ಟ ಮತ್ತು ಉತ್ಪಾದನೆಯಲ್ಲಿಯೂ ಕೆಳಮಟ್ಟದಲ್ಲಿರುವ ಕಾರ್ಖಾನೆಗಳನ್ನು ಮುಚ್ಚುವ ಆಲೋಚನೆ ಸರ್ಕಾರದಲ್ಲಿದೆಯೇ?

ಶೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಸಂಪನ್ಮೂಲ ಅಭಿವೃದ್ಧಿ ಸಚಿವರು)